ಇದೆ, ಅದು ಮೂಲಭೂತವಾಗಿ ಸಂಪೂರ್ಣ ವಿಮರ್ಶೆ ಮಾಡಬೇಕಾಗುತ್ತದೆ. ಅವರ ಪ್ರಶ್ನೆ ಬಂದಾಗ ಬೇಕಾದರೆ ಇನ್ನೂ ಡೀಟೇಲ್ ಆಗಿ ನಾನು ಹೇಳುತ್ತೇನೆ.

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ ನೀಡುವ ಬಗ್ಗೆ

379(3631): ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಆಡಳಿತ ವಿಕೇಂದ್ರೀಕರಣಕ್ಕೆ ಬದ್ದವಾಗಿರುವ ಈ ಸರ್ಕಾರ ಈಗಾಗಲೇ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನ, ಕಾನೂನು ಹಾಗೂ ನಿಯಮಗಳ ಅಡಿಯಲ್ಲಿ ಕೊಡಲಾದ ಕೆಲವು ಅಧಿಕಾರಗಳನ್ನು ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ರೀತಿಯ ಮೊಟಕುಗೊಳಿಸಿದ ಅಧಿಕಾರಗಳನ್ನು ಪುನಃ ಪಂಚಾಯತ್ ರಾಜ್ ವ್ಯವಸ್ಥೆಗೆ ವರ್ಗಾಯಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ:

ಇ) ಮೊಟಕಾಗಿರುವ ಅಧಿಕಾರಗಳನ್ನು ಪಂಚಾಯತ್ ರಾಜ್ ವ್ಯವಸ್ಥೆಗೆ ವರ್ಗಾಯಿಸಲು ಬೇಕಾದ ಕಾಲಮಿತಿ ಎಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರನ್ವಯ ಸಂವಿಧಾನದ 11ನೇ ಪರಿಚ್ಛೆದದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸ ಲಾಗಿದ್ದರೂ ಕೆಲವೊಂದು ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳೇ ಅನುಷ್ಠಾನಗೊಳಿಸುತ್ತಿದೆ.

ಆ) ಈಗಾಗಲೇ ಸರ್ಕಾರವು ಹಲವಾರು ಯೋಜನೆಗಳನ್ನು ಸರಳೀಕರಿಸಲು ಕ್ರಮ ಕೈಗೊಂಡಿದೆ ಹಾಗೂ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕಾರ್ಯಹಂಚಿಕೆ ನಕ್ಷೆಯನ್ನು ತಯಾರಿಸಲಾಗಿದೆ.

ಇ) ಈ ವಿಷಯವು ನಿರಂತರ ಪ್ರಕ್ರಿಯೆ ಆಗಿದ್ದು ಇದನ್ನು ವರ್ಷಾಂತ್ಯದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಶೆಡ್ಯೂಲ್ 3ರ ಪ್ರಕಾರ ಜನರಿಗೆ ಬಹಳಷ್ಟು ಅನುಕೂಲ ಇರುವಂತಹ ಶಿಕ್ಷಣ ಆಗಲಿ, ಅನಿಮಲ್ ಹಸ್ಬೆಂಡರಿ ಆಗಲಿ, ಫುಡ್ ಡಿಸ್ಟ್ರಿಬ್ಯೂಷನ್ ಆಗಲೀ ಈ ಎಲ್ಲಾ ಕಾರ್ಯಗಳನ್ನು ನೀವು ಇಲಾಖೆಯ ಮುಖಾಂತರ ನಡೆಸುತ್ತಿದ್ದೀರಿ. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ವ್ಯಾಪ್ತಿಗೆ ಇದು ಬರಲೇ ಇಲ್ಲ. ಅವನ್ನು ಯಾವಾಗ ಕೊಡುತ್ತೀರಿ? ನಮ್ಮ ದುರ್ದೈವ ಎಂದರೆ ಈ ಡಿಸೆಂಟ್ರಲೈಸೇಷನ್ ಬಗ್ಗೆ ಬಹಳಷ್ಟು ಬದ್ಧತೆ ಇರುವಂತಹ ಮಂತ್ರಿಗಳು ಇದ್ದಾರೆ, ಇಲಾಖೆಯ ಶಿಕ್ಷಣ ಸಚಿವರು ಇದ್ದಾರೆ, ಆದರೂ ಸಹಿತ ಅಧಿಕಾರ ಮಾತ್ರ ಬೆಂಗಳೂರಿನಲ್ಲಿಯೇ ಇದೆ. ಜಿಲ್ಲೆಗೆ ಹೋಗಲೇ ಇಲ್ಲ. ಅದಕ್ಕೆ ಯಾವಾಗ ಅಧಿಕಾರವನ್ನು ಕೊಡುತ್ತೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ:– ಯಾವ ಜಿಲ್ಲಾ ಮಟ್ಟಕ್ಕೆ ಕಾರ್ಯಕ್ರಮ ಆಗಬೇಕಾಗಿತ್ತು, ಅದು ಸ್ಟೇಟ್ ಮಟ್ಟಕ್ಕೆ ಆಗುತ್ತಿದೆ. ಅದರ ಒಂದು ದೊಡ್ಡ ಪಟ್ಟಿನೇ ಇದೆ. ಈಗ ಕಾನೂನು ಪ್ರಕಾರ, ಸಂವಿಧಾನದ ಪ್ರಕಾರ, ಸಂವಿಧಾನದ 9ನೇ ಆಕ್ಟ್ ಪ್ರಕಾರ ಮತ್ತು ನಮ್ಮ 73ನೇ ತಿದ್ದುಪಡಿ ಪ್ರಕಾರ

ಯಾವ್ಯಾವ ಜವಾಬ್ದಾರಿಗಳನ್ನು ನಾವು ಕಾನೂನು ಪ್ರಕ, 11ನೇ ಶೆಡ್ಯೂಲ್ ಪ್ರಕಾರ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಂಚಿದ್ದೇವೆ, ಅದರ ಪ್ರಕಾರ ಎಲ್ಲಾ ಕಾರ್ಯಕ್ರಮಗಳು ಆಗಬೇಕು. ಇನ್ನೂ ನಾವು ಆ ಮಟ್ಟಕ್ಕೆ ಕೊಡಲು ಆಗಿಲ್ಲ. ಅದಕ್ಕೋಸ್ಕರ ನಾವು ರ್ಯಾಷನಲೈಸೇಷನ್ ಮತ್ತು ಆಕ್ಟಿವಿಟಿ ಮ್ಯಾಪಿಂಗ್ ಅದು ಮಹತ್ತರವಾದಂತಹ ಹೆಜ್ಜೆ. ಅದನ್ನು ನಾವು ಮಾಡುತ್ತಿದ್ದೇವೆ. ಆ ದಿಸೆಯಲ್ಲಿ ಹೊರಟಿದ್ದೇವೆ.

ಶ್ರೀ ಡಿ.ಆರ್. ಪಾಟೀಲ್:– ಸಾರ್, ಆಕ್ಟಿವಿಟ್ ಮ್ಯಾಪಿಂಗ್ ತಾವು ಈಗಾಗಲೇ ಮಂತ್ರಿ ಮಂಡಲದಲ್ಲಿ ಪಾಸ್ ಮಾಡಿಸಿಕೊಳ್ಳುವುದರಲ್ಲಿ ಯಶಸ್ವಿ ಆಗಿದ್ದೀರಿ ಎಂದು ತಿಳಿದು ಬಂದಿದೆ. ಆ ಆಕ್ಟಿವಿಟಿ ಮ್ಯಾಪಿಂಗ್ ಪ್ರಕಾರ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನೂ ಕೊಡಲಿಕ್ಕೆ ನೀವು ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ:– ಈ ಅಸೆಂಬ್ಲಿಯಲ್ಲಿ ಕೂಡ ತಮ್ಮಂತಹ ಶಾಸಕರು ಅದರ ಬಗ್ಗೆ ಒತ್ತಾಯ ಮಾಡಿದರೆ ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಏಕೆಂದರೆ ಜವಾಬ್ದಾರಿ ಮತ್ತು ಹಣಕಾಸಿಗೆ ಸಂಬಂಧಪಟ್ಟ ಅಧಿಕಾರಸ್ಥರು ಅದನ್ನೆಲ್ಲಾ ವಿಕೇಂದ್ರೀಕರಣ ಮಾಡಬೇಕಾಗುತ್ತದೆ. ವಿಕೇಂದ್ರೀಕರಣ ಮಾಡಲು ಹೊರಟಾಗ ಒಮ್ಮತ ಎಲ್ಲಾ ವಿಷಯದಲ್ಲಿ ಬರುವು ಕಷ್ಟ. ಆದರೆ ನಾವು ಸಂವಿಧಾನದ ಪ್ರಕಾರ ಹೋಗಬೇಕಾದರೆ ವಿಕೇಂದ್ರೀಕರಣ ಮಾಡಬೇಕಾಗುತ್ತದೆ. ಫಂಕ್ಷನ್ಸ್, ಫಂಕ್ಷನರೀಸ್ ಮತ್ತು ಫೈನಾನ್ಸಸ್ ಇವು ಒಟ್ಟಿಗೆ ವಿಕೇಂದ್ರೀಕರಣ ಮಾಡಿದರೆ ಮಾತ್ರ ಅಲ್ಲಿ ಉಪಯುಕ್ತವಾದಂತಹ ಕೆಲಸ ಮಾಡುವುದಕ್ಕೆ ಆಗುತ್ತದೆ. ಒಂದು ಉದಾಹರಣೆ ನಾನು ಕೊಡುತ್ತೇನೆ. ವೇ ಸೈಡ್ಸ್ ಪ್ಲಾಂಟ್ಸ್ ರಸ್ತೆ ಮೇಲಿನ ಕಾರ್ಯಕ್ರಮ ಏನು ಇದೆ, ಅದು ವರ್ಗಾವಣೆ ಮಾಡುವುದಕ್ಕಿದರೆ ಅದಕ್ಕೆ ಸಂಬಂಧಪಟ್ಟ ಹಣ ಮತ್ತು ಫಂಕ್ಷನರೀಸ್ ಅದನ್ನೂ ಕೂಡ ಕೊಟ್ಟರೆ ಆ ಕಾರ್ಯಕ್ರಮ ಮಾಡಲು ಆಗುತ್ತದೆ. ನನಗೆ ಎಷ್ಟು ಸಾಧ್ಯ ಅದರ ಬಗ್ಗೆ ಅವಕಾಶ ಸಿಕ್ಕಾಗ ಸಭೆಯ ಮುಂದೆ ವಿಚಾರ ಇಡುತ್ತೇನೆ. ಆ ಒಂದು ವಿಚಾರವನ್ನು ಬಲಪಡಿಸಲಿಕ್ಕೆ ಈ ಕಡೆಯವರೂ ಮತ್ತು ಆ ಕಡೆಯವರು ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:– ಬಹಳ ಇಂಪಾರ್ಟೆಂಟ್ ಇದೆ.

ಅಧ್ಯಕ್ಷರು:– ನನಗೂ ಗೊತ್ತಿದೆ, ಇಂಪಾರ್ಟೆಂಟ್ ಇದೆ.

ಶ್ರೀ ಡಿ.ಆರ್. ಪಾಟೀಲ್:– ಸಾರ್, ನಾವು ಕೇಳಿದ್ದು ಕಾನೂನು ಪ್ರಕಾರ ಪಂಚಾಯತ್ ರಾಜ್‌ಗೆ ಏನು ಅಧಿಕಾರ ಕೊಟ್ಟಿದ್ದೀರಿ, ಅವುಗಳಿಗೆ ಸಂಬಂಧಿಸಿದಂತಹ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನು ಯಾವಾಗ ಹಸ್ತಾಂತರ ಮಾಡುತ್ತೀರಿ ಎಂದು ನಾನು ಕೇಳಿದ್ದು. ಅದಕ್ಕೆ ಈ ಸದನ ಸಂಬಂಧ ಬರುವುದಿಲ್ಲ. ಮಾಡಬೇಕಾಗಿದ್ದು ಇಲಾಖೆಯವರು. ಹಣಕಾಸಿನ ಇಲಾಖೆಯವರಾಗಲೀ ಅಥವಾ ಆರ್‌ಡಿಪಿಆರ್ ಇಲಾಖೆಯವರಾಗಲೀ ಅಥವಾ ಸಂಬಂಧಿಸಿದ ಉಳಿಕೆ ಇಲಾಖೆಯವರು, ಶಿಕ್ಷಣ ಇಲಾಖೆ ಆಗಲೀ ಅವರು ಮಾಡುವಂತಹ ಕೆಲಸ. ಸದನ ಮಾಡುವಂತಹ ಕೆಲಸ ಏನು ಇದರಲ್ಲಿ ಇಲ್ಲ. ದಯವಿಟ್ಟು ಅದಕ್ಕೆ ಸನ್ಮಾನ್ಯ ಮಂತ್ರಿಗಳು ಇದನ್ನು ಕಾಲಮಿತಿಯೊಳಗೆ ಒಳಪಟ್ಟು ಮುಂದಿನ ಅಕ್ಟೋಬರ್ 2ರ ಒಳಗಾಗಿ ಕಾನೂನು ಪ್ರಕಾರ ಏನು ಕೊಟ್ಟಿದ್ದೀರಿ ಅವನ್ನು ಹಸ್ತಾಂತರ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಈ ಸದನಕ್ಕೆ ಕೊಡಬೇಕು.

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಪಾಟೀಲ್ ಅವರೇ, ಅದನ್ನು ಆಡಳಿತಾತ್ಮಕವಾಗಿ ಮಾಡುಬೇಕಾಗುತ್ತದೆ. ತಾವು ಹೇಳುವುದು ಸರಿ. ಕಾನೂನಿನ ಬದಲಾವಣೆ ಪ್ರಶ್ನೆ ಇಲ್ಲ. ಕಾನೂನಿನಲ್ಲಿ

ಏನು ಇದೆ, ಅದರ ಪ್ರಕಾರ ನಾವು ಅಡ್ಮಿನಿಸ್ಟೇಟೀವ್ ಆರ್ಡರ್ಸ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಾವು ಏನು ಮಾಡಿದ್ದೇವೆ ಎಂದರೆ ಒಂದು ಜಾಯಿಂಟ್ ಟೀಮ್ ಮಾಡಿದ್ದೇವೆ. ಆರ್‌ಡಿಪಿಆರ್, ಪ್ಲಾನಿಂಗ್ ಮತ್ತು ಫೈನಾನ್ಸ್, ಈ ಮೂರು ಇಲಾಖೆಯವರು ಎಲ್ಲಾ ಇಲಾಖೆಯ ಜೊತೆ ಕುಳಿತು ಈ ವಿಕೇಂದ್ರೀಕರಣ ಆಡಳಿತಾತ್ಮಕವಾಗಿ ಹೇಗೆ ಮಾಡಬೇಕು ಎಂಬ ಬಗ್ಗೆ ಈಗ ಕೂಲಂಕುಷವಾಗಿ ವಿಚಾರ ಮಾಡುತ್ತಿದ್ದಾರೆ. ನನಗೆ ಅನಿಸುತ್ತದೆ, ಒಂದು ಮೂರು ತಿಂಗಳಲ್ಲಿ ಅಕ್ಟೋಬರ್ ನವೆಂಬರ್ ತಿಂಗಳ ಒಳಗಾಗಿ ಈ ಕಾರ್ಯಕ್ರಮ ಏನು ಇದೆ, ಅಡ್ಮಿನಿಸ್ಟೇಟೀವ್ ಡೀಸೆಂಟ್ರ ಲೈಸೇಷನ್ 73ನೇ ಸಂವಿಧಾನದ ತಿದ್ದುಪಡಿ ಪ್ರಕಾರ ಇದು ತಯಾರಾಗುತ್ತದೆ. ಆ ನಂತರ ಸರ್ಕಾರ ಕೆಲಸ ಮಾಡಬೇಕಾಗುತ್ತದೆ. ತಾವು ಎಲ್ಲರೂ ಅದಕ್ಕೆ ಸಹಕಾರ ಕೊಡಬೇಕು.

ಉಡುಪಿ ಮತ್ತು ದ.ಕ. ಜಿಲ್ಲೆಯಲ್ಲಿರುವ ಆಯುರ್ವೇದ ಚಿಕಿತ್ಸಾಲಯಗಳು

380(2698): ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಆಯುರ್ವೇದ ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು ಮತ್ತು ಎಲ್ಲಿವೆ ವಿವರ ಒದಗಿಸುವುದು;

ಆ) ಹಿಂದೆ ಇದ್ದ ರೂರಲ್ ಡಿಸ್ಪೆನ್ಸರಿಯಲ್ಲಿದ್ದ ವೈದ್ಯರ ಸೇವೆಯನ್ನು ಖಾಯಂ ಮಾಡಿದ್ದು, ಅಂತಹ ವೈದ್ಯರು ನಿವೃತ್ತರಾದ ನಂತರ ಅಂತಹ ಚಿಕಿತ್ಸಾಲಯಗಳಿಗೆ ವೈದ್ಯರನ್ನು ಭರ್ತಿ ಮಾಡದಿರಲು ಕಾರಣವೇನು;

ಇ) ಇಂತಹ ಎಲ್ಲಾ ರೂರಲ್ ಡಿಸ್ಪನ್ಸರಿಗಳಿಗೆ ವೈದ್ಯರ ಮತ್ತು ಸಿಬ್ಬಂದಿಗಳ ನೇಮಕ ಯಾವಾಗ ಮಾಡಲಾಗುವುದು;

ಈ) ಆಯುರ್ವೇದ ಚಿಕಿತ್ಸಾಲಯಗಳಿಗೆ ವರ್ಷಕ್ಕೆ ಎಷ್ಟು ಹಣದ ಔಷಧಿ ಒದಗಿಸಲಾಗುವುದು?

ಶ್ರೀಮತಿ ನಫೀಸ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು):

ಅ) ಒಟ್ಟು 10. ವಿವರ ಕೆಳಕಂಡಂತಿದೆ.

ಜಿಲ್ಲೆ	ತಾಲ್ಲೂಕು	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ
ಉಡುಪಿ	ಉಡುಪಿ	1. ಫಲಿಮಾರು
		2. ಹೊಸೂರು ಕರ್ಜೆ
		3. ಬೆಳ್ಳು
	ಕುಂದಾಪುರ	4. ನಾವುಂದ
		5. ಅಮಾಸೆ ಬೈಲು
	ಕಾರ್ಕಳ	6. ಕೆರವಾಶೆ
	ಮಂಗಳೂರು	7. ಬಳಕುಂಜೆ
ದಕ್ಷಿಣ ಕನ್ನಡ	ಬೆಳ್ತಂಗಡಿ	8. ಕಾಣಿಯೂರು
		9. ತಣ್ಣೀರು ಪಂಥ
	ಬಂಟ್ವಾಳ	10. ಸಜಿಪಮೂಡ